ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ,
ಕೆ.ಆರ್.ವೃತ್ತ, ಬೆಂಗಳೂರು-560 001

ಸಂಖ್ಯೆ:ಎಂಸಿ4ಘೋಷಸಮಿತಿಸಭೆ22/2008-09 ದಿನಾಂಕ31/12/2008

## ಜ್ಞಾಪನಾ

ವಿಷಯ:-ಕರ್ನಾಟಕ ರಾಜ್ಯದಲ್ಲಿ ಮತೀಯ ಅಲ್ಪಸಂಖ್ಯಾತರುಗಳು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳನ್ನು ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಿಸುವ ಬಗ್ಗೆ.

Despatch
5/1/09

ಉಲ್ಲೇಖ:-1)ಸರ್ಕಾರದ ಅಧಿಸೂಚನೆ ಸಂಖ್ಯೆಇಡಿ4ಎಸ್‌ಎಂಸಿ 2005 ದಿನಾಂಕ11/09/2007 ಹಾಗೂ ತಿದ್ದುಪಡಿ ದಿನಾಂಕ23/10/2007.

2)ಸರ್ಕಾರದ ಸುತ್ತೋಲೆ ಸಂಖ್ಯೆಇಡಿ5ಎಸ್‌ಎಂಸಿ2002 ದಿನಾಂಕ20/7/2004

3)ಸರ್ಕಾರದ ತಿದ್ದೋಲೆಸಂಖ್ಯೆಇಡಿ22ಎಂಪಿಎಸ್ 2005 ದಿನಾಂಕ12/12/2006

4)ಉಪನಿರ್ದೇಶಕರುಗಳಿಂದ ಬಂದಿರುವ ಪ್ರಸ್ತಾವನೆಗಳು

---000---

**ಪ್ರಸ್ತಾವನೆ :-**

ಮೇಲಿನ ಉಲ್ಲೇಖ(1)ರಿಂದ(3)ರವರೆಗಿನ ಸರ್ಕಾರಿ ಅಧಿಸೂಚನೆಗಳಲ್ಲಿ ಮತೀಯ ಅಲ್ಪಸಂಖ್ಯಾತರುಗಳು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳನ್ನು ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಿಸುವ ಬಗ್ಗೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಅಧಿಕಾರಿಗಳ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು ದಿನಾಂಕ22/12/2008ರಂದು ಪರಿಶೀಲನಾ ಸಮಿತಿ ಸಭೆ ಸೇರಿ ಕೆಳಕಂಡ ಶಿಕ್ಷಣ ಸಂಸ್ಥೆಗಳ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಮತೀಯ ಅಲ್ಪಸಂಖ್ಯಾತರು ನಡೆಸುತ್ತಿರುವ ಕೆಳಕಂಡ ಶಾಲೆಗಳನ್ನು ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಿಸುವ ಬಗ್ಗೆ ಕೆಲವೊಂದು ಷರತ್ತುಗಳನ್ನು ಅನ್ವಯಿಸಿ, ಸದರಿ ಷರತ್ತುಗಳನ್ನು ಪೂರೈಸಿರುವಂತಹ ಶಾಲೆಗಳನ್ನು ಮತೀಯ ಅಲ್ಪಸಂಖ್ಯಾತರ ಶಾಲೆಗಳೆಂದು ಎಂದು ಘೋಷಿಸಲು ಸಮಿತಿಯು ತೀರ್ಮಾನಿಸಿತು.

**ಆದೇಶ :-**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಮತೀಯ ಅಲ್ಪಸಂಖ್ಯಾತರು ನಡೆಸುತ್ತಿರುವ ಶಾಲೆಗಳನ್ನು ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಿಸಿ ಆದೇಶಿಸಿದೆ. ಕಾಲಾನುಕಾಲಕ್ಕೆ ಮಾನ್ಯತೆಯನ್ನು ನವೀಕರಿಸುವ ಸಮಯದಲ್ಲಿ

ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಘೋಷಣೆ ಮಾಡಲಾದ ಮತೀಯ ಅಲ್ಪಸಂಖ್ಯಾತ ಸ್ಥಾನಮಾನವನ್ನು ಹಿಂತೆಗೆದುಕೊಳ್ಳಲಾಗುವುದು.

| ಕ್ರಮ ಸಂಖ್ಯೆ | ಶಿಕ್ಷಣ ಸಂಸ್ಥೆಯ ಹೆಸರು | ಧರ್ಮ | ಶಾಲೆಯ ಹೆಸರು ಮತ್ತು ವಿಳಾಸ |
|---|---|---|---|
| 1 | ಅಲಾರ್ಡ್ ಎಜುಕೇಷನಲ್ ಸೊಸೈಟಿ, ವಿಲ್ಲಮೊರೊಮಿಯೊ, 44/1,ಹೆನ್ನೂರು ರಸ್ತೆ, ಸಂತ ಥಾಮಸ್ ಟೌನ್, ಬೆಂಗಳೂರು–84 | ಕ್ರಿಶ್ಚಿಯನ್ | ಸ್ಟೆಂಟ್ ಚಾರ್ಲ್ಸ್ ಕನ್ನಡ ಪ್ರೌಢಶಾಲೆ, ಕಮ್ಮನಹಳ್ಳಿ, ಬೆಂಗಳೂರು–84 |
| 2 | ದಿ ಮೈಸೂರು ಡಯೋಸಿಸ್ ಎಜುಕೇಷನಲ್ ಸೊಸೈಟಿ, ಜಯಲಕ್ಷ್ಮೀಪುರಂ, ಮೈಸೂರು | ಕ್ರಿಶ್ಚಿಯನ್ | ಸಂತ ಅಗಸ್ಟೀನರ ಪ್ರೌಢಶಾಲೆ, ಫಾಸ್ಕಲ್ ನಗರ,(ಜಂಗೇರಿ) ಕೊಳ್ಳೇಗಾಲ ತಾ.. |
| 3 | ಸೆಂಟ್‌ಆನ್ಸ್ ಶಿಕ್ಷಣ ಸಂಸ್ಥೆ, ನಂ.3, ಮಿಲ್ಲರ್ ರಸ್ತೆ, ಬೆಂಗಳೂರು | ಕ್ರಿಶ್ಚಿಯನ್ | ಸೆಂಟ್ ಆನ್ಸ್ ಪ್ರೌಢಶಾಲೆ, ಗೂಕುಂಟೆ, ಮುಳಬಾಗಿಲು ತಾ.. |
| 4 | ದಿ ಮೈಸೂರು ಡಯೋಸಿಸ್ ಎಜುಕೇಷನಲ್ ಸೊಸೈಟಿ, ಜಯಲಕ್ಷ್ಮೀಪುರಂ, ಮೈಸೂರು | ಕ್ರಿಶ್ಚಿಯನ್ | ಸೆಂಟ್ ಥಾಮಸ್ ಗ್ರಾಮಾಂತರ ಪ್ರೌಢಶಾಲೆ, ಹೋಮಿಯರ್ ಪಾಳ್ಯ, ಕೊಳ್ಳೇಗಾಲ ತಾ.. |
| 5 | ಶಾಂತಿ ನಿಕೇತನ ಚಾರಿಟಬಲ್ ಸೊಸೈಟಿ, ಎಂ.ಸಿ.ಬಿ.ಎಸ್. ಭವನ, ಸಾಗರ ರಸ್ತೆ, ಶಿವಮೊಗ್ಗ–577204 | ಕ್ರಿಶ್ಚಿಯನ್ | ಗುಡ್ ಶೆಫರ್ಡ್ ಹಿರಿಯ ಪ್ರಾಥಮಿಕ ಶಾಲೆ, ರಿಪ್ಪನ್ ಪೇಟೆ–577426, ಶಿವಮೊಗ್ಗ ಜಿಲ್ಲೆ |
| 6 | ದ ಮೇರಿ ಸಲ್ವೆನ್ ಸೊಸೈಟಿ, ಸೆಂಟ್ ಮೇರಿ ಕಾನ್ವೆಂಟ್, ಚಾಮರಾಜ ಪೇಟೆ, ಬೆಂಗಳೂರು–18 | ಕ್ರಿಶ್ಚಿಯನ್ | ಸ್ಟೆಂಟ್ ರೀಟಾ ಪ್ರೌಢಶಾಲೆ, ಕುಣಿಗಲ್, ತುಮಕೂರು ಜಿಲ್ಲೆ |
| 7 | ದೀಪ್ತಿ ಸೋಷಿಯಲ್ ಸರ್ವೀಸ್ ಸೊಸೈಟಿ, ಸೇಕ್ರೆಡ್ ಹಾರ್ಟ್ ಕಾನ್ವೆಂಟ್, ಸಿದ್ದಾಪುರ ಅಂಚೆ ಕೊಡಗು ಜಿಲ್ಲೆ | ಕ್ರಿಶ್ಚಿಯನ್ | ದೀಪ್ತಿ ಹಿರಿಯ ಪ್ರಾಥಮಿಕ ಶಾಲೆ, 7ನೇ ಹೊಸಕೋಟೆ, ಕೊಡಗು ಜಿಲ್ಲೆ–571237 |
| 8 | ಕೇಂಬ್ರಿಡ್ಜ್ ವಿದ್ಯಾ ಸಂಸ್ಥೆ, 3ನೇ ಅಡ್ಡರಸ್ತೆ, ಜೆಸ್ಟನ್ ಮೊಹಲ್ಲಾ, ಚಿಕ್ಕಮಗಳೂರು–577101 | ಮುಸ್ಲಿಂ | ಕೇಂಬ್ರಿಡ್ಜ್ ಪ್ರಾಥಮಿಕ ಶಾಲೆ, ಜೆಸ್ಟನ್ ಮೊಹಲ್ಲಾ, 3ನೇ ಹಂತ ಚಿಕ್ಕಮಗಳೂರು–577101 |
| 9 | ಕೇಂಬ್ರಿಡ್ಜ್ ವಿದ್ಯಾ ಸಂಸ್ಥೆ, 3ನೇ ಅಡ್ಡರಸ್ತೆ, ಜೆಸ್ಟನ್ ಮೊಹಲ್ಲಾ, ಚಿಕ್ಕಮಗಳೂರು–577101 | ಮುಸ್ಲಿಂ | ಕೇಂಬ್ರಿಡ್ಜ್ ಪ್ರೌಢಶಾಲೆ, ಜೆಸ್ಟನ್ ಮೊಹಲ್ಲಾ, 3ನೇ ಹಂತ ಚಿಕ್ಕಮಗಳೂರು–577101 |

ಷರತ್ತುಗಳು

1)ಶಾಲೆಗಳನ್ನು ನಡೆಸುವ ಆಡಳಿತ ಮಂಡಳಿಯು ಟ್ರಸ್ಟ್/ಸೊಸೈಟಿ ನೊಂದಣಿ ಕಾಯ್ದೆ ಪ್ರಕಾರ ನೊಂದಣಿಯಾಗಿರ ಬೇಕು. ಹಾಗೂ ಕಾಲಕಾಲಕ್ಕೆ ನವೀಕರಿಸಿರಬೇಕು.

ಶಾಲೆಗಳ ಆಡಳಿತ ಮಂಡಳಿಯ ಸದಸ್ಯರು ಕಾರ್ಯಕಾರಿ ಸಮಿತಿಯಲ್ಲಿದ್ದು, ಆಯಾಯ ಮತೀಯ ಅಲ್ಪಸಂಖ್ಯಾತರ ಸಂಖ್ಯೆ ಕನಿಷ್ಟ ಮೂರನೆ ಎರಡರಷ್ಟಿರಬೇಕು.

ಶಾಲೆಗಳನ್ನು ನಡೆಸುವ ಮತೀಯ ಅಲ್ಪಸಂಖ್ಯಾತ ಆಡಳಿತ ಮಂಡಳಿಯ ಸದಸ್ಯರು ಕಾರ್ಯಕಾರಿ ಸಮಿತಿಯಲ್ಲಿದ್ದರೆ ಅಂತಹ ಸದಸ್ಯರು ಸಂಬಂಧಿಸಿದ ತಹಶೀಲ್ದಾರರಿಂದ ಜಾತಿ ಪ್ರಮಾಣ ಪತ್ರವನ್ನು ಪಡೆದಿರಬೇಕು.

4) ಮತೀಯ ಅಲ್ಪಸಂಖ್ಯಾತರು ನಡೆಸುತ್ತಿರುವ ಪ್ರಾಥಮಿಕ/ಪ್ರೌಢಶಾಲೆಗಳನ್ನು ನಡೆಸಲು ಕರ್ನಾಟಕ ಶಿಕ್ಷಣ ಕಾಯ್ದೆಯಡಿಯಲ್ಲಿ ಇಲಾಖೆಯಿಂದ ನೊಂದಾಯಿಸಿರಬೇಕು, ಮತ್ತು ಕಾಲಕಾಲಕ್ಕೆ ಶಾಲಾ ಮಾನ್ಯತೆಯನ್ನು ನವೀಕರಿಸಿರಬೇಕು. ಹಾಗೂ ಇತ್ತೀಚಿನ ಮಾನ್ಯತೆ ನವೀಕರಣ ಪತ್ರ ಹೊಂದಿರತಕ್ಕದ್ದು.

5)ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯವರು ನಡೆಸುತ್ತಿರುವ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಂಸ್ಥೆಗಳೆಂದು ಘೋಷಿಸುವ ಸಂಬಂಧ, ಆಯಾಯ ಮತೀಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಪ್ರದೇಶದಲ್ಲಿ ವಾಸಿಸುತ್ತಿರುವ ಆಯಾಯ ಅಲ್ಪಸಂಖ್ಯಾತ ಸಮುದಾಯದ ಜನಗಣತಿಗೆ ತಕ್ಕಂತೆ, ಆಯಾಯ ಅಲ್ಪಸಂಖ್ಯಾತ ವರ್ಗದ ವಿದ್ಯಾರ್ಥಿಗಳ ಹಿತದೃಷ್ಟಿಯನ್ನು ಕಾಪಾಡಿಕೊಳ್ಳಲು ಆಯಾಯ ವರ್ಗದ ಅಲ್ಪಸಂಖ್ಯಾತ ವರ್ಗದ ವಿದ್ಯಾರ್ಥಿಗಳನ್ನು ಕನಿಷ್ಟ ಅದೇ ಪ್ರಮಾಣದಲ್ಲಿ ದಾಖಲು ಮಾಡಿಕೊಳ್ಳತಕ್ಕದ್ದು.

5) ಶಾಲೆಗಳನ್ನು ನಡೆಸುತ್ತಿರುವ ಆಡಳಿತ ಮಂಡಳಿಯು ಆಯಾ ಮತೀಯ ಅಲ್ಪಸಂಖ್ಯಾತ(ಕ್ರಿಶ್ಚಿಯನ್, ಮುಸ್ಲಿಂ,ಜೈನ,ಬೌದ್ಧ, ಸಿಖ್) ರೆಂದು ಖಚಿತ ಪಡಿಸಿಕೊಳ್ಳತಕ್ಕದ್ದು.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು
31/12/08

ಪ್ರತಿಗಳನ್ನು

1)ಸರ್ಕಾರದ ಕಾರ್ಯದರ್ಶಿಗಳು, (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ) ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು–01 ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

2)ನಿರ್ದೇಶಕರು, ಪ್ರೌಢಶಿಕ್ಷಣ ಹಾಗೂ ಪ್ರಾಥಮಿಕ ಶಿಕ್ಷಣ ಸಾ.ಶಿ.ಇ. ಆಯುಕ್ತರ ಕಛೇರಿ, ಬೆಂಗಳೂರು–01 ಇವರಿಗೆ ಮಾಹಿತಿಗಾಗಿ ಕಳುಹಿಸಿದೆ

3)ಉಪನಿರ್ದೇಶಕರು, ಸಾ.ಶಿ.ಇಲಾಖೆ, ಬೆಂಗಳೂರು(ಉತ್ತರ), ತುಮಕೂರು, ಮೈಸೂರು, ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು, ಚಾಮರಾಜನಗರ, ಕೋಲಾರ, ಇವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

4)ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬೆಂಗಳೂರು ಉತ್ತರವಲಯ–3, ಕೊಳ್ಳೆಗಾಲ, ಮುಳಬಾಗಿಲು, ಕುಣಿಗಲ್, ಚಿಕ್ಕಮಗಳೂರು, ಸೋಮವಾರಪೇಟೆ, ಹೊಸನಗರ, ಇವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

5)ಸಂಬಂಧಿಸಿದ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು/ಕಾರ್ಯದರ್ಶಿಗಳಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

6)ಸಂಬಂಧಿಸಿದ ಶಾಲಾ ಮುಖ್ಯ ಶಿಕ್ಷಕರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

7)ಕಛೇರಿ ಪ್ರತಿ